# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 696 (786) |
| ಉತ್ತರಿಸಬೇಕಾದ ದಿನಾಂಕ | 10.03.2026 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರದಲ್ಲಿ ಈಗಾಗಲೇ ಕೈಗೊಳ್ಳಲಾಗಿರುವ ಒಳಚರಂಡಿ ಕಾಮಗಾರಿಗಳು ಯಾವುವು; ಅದಕ್ಕೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು; | ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಂಡಳಿ ವತಿಯಿಂದ ಕೈಗೊಂಡ ಒಳಚರಂಡಿ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.<br>1. ಕಲಬುರಗಿ ನಗರದಲ್ಲಿ ಕ.ನ.ನೀ.ಸ ಮತ್ತು ಒ.ಚ ಮಂಡಳಿ ವತಿಯಿಂದ 1ನೇ ಹಂತದ ಒಳಚರಂಡಿ ಯೋಜನೆಯು ರೂ.100.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, 92 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ ಯೋಜನೆಯನ್ನು 1978ನೇ ವರ್ಷದಲ್ಲಿ ಚಾಲನೆಗೊಳಿಸಲಾಗಿದೆ.<br>2. 2ನೇ ಹಂತದ ಒಳಚರಂಡಿ ಯೋಜನೆಯ ರೂ.1329.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, 141 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ ಯೋಜನೆಯನ್ನು 2001ನೇ ವರ್ಷದಲ್ಲಿ ಚಾಲನೆಗೊಳಿಸಲಾಗಿದೆ.<br>3. 3ನೇ ಹಂತದ ಒಳಚರಂಡಿ ಯೋಜನೆಯ ರೂ.1662.53 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಮುಖ್ಯ ಸೀವರ್ ಕೊಳವೆ ಮಾರ್ಗವನ್ನು ಒಳಗೊಂಡು ಒಟ್ಟು 53 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸಿ 2015 ವರ್ಷದಲ್ಲಿ ಚಾಲನೆಗೊಳಿಸಲಾಗಿದೆ.<br>4. 4ನೇ ಹಂತದ ಒಳಚರಂಡಿ ಯೋಜನೆ(ಹಂತ-1) ಯೋಜನೆಯು ರೂ.14130.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, 152 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಮತ್ತು 25 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಿ, |

| | | |
|---|---|---|
| | | ಯೋಜನೆಯನ್ನು 2019ನೇ ವರ್ಷದಲ್ಲಿ ಚಾಲನೆಗೊಳಿಸಲಾಗಿದೆ.<br><br>5. 4ನೇ ಹಂತದ ಒಳಚರಂಡಿ ಯೋಜನೆ(ಹಂತ-2) ಅಮೃತ್ ಯೋಜಯ ರೂ.15680.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, 219 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಮತ್ತು 20 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕ ನಿರ್ಮಿಸಿ, ಯೋಜನೆಯನ್ನು 2019ನೇ ವರ್ಷದಲ್ಲಿ ಚಾಲನೆಗೊಳಿಸಲಾಗಿದೆ.<br><br>**KUIDFC ವತಿಯಿಂದ ಕೈಗೊಂಡ ಒಳಚರಂಡಿ ಕಾಮಗಾರಿಗಳ ವಿವರ:**<br><br>• ಕಲಬುರಗಿ ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಅನುದಾನಕ್ಕೆ ಅನುಗುಣವಾಗಿ ಒಳಚರಂಡಿ ಜಾಲ, ಹಾಳಾಗಿರುವ ಕೊಳವೆ ಮಾರ್ಗ ದುರಸ್ಥಿ ಮತ್ತು ಬಿಟ್ಟು ಹೋದ ಕೊಳವೆ ಜಾಲ ಕಾಮಗಾರಿಗಳನ್ನು ಒಳಗೊಂಡಂತೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>• ಈ ಒಳಚರಂಡಿ ಕಾಮಗಾರಿಯನ್ನು ನಿರ್ವಹಿಸಲು, ದಿನಾಂಕ 06.05.2025 ರಂದು M/s STI Engineers Pvt. Ltd. (STI-ACPL ಜಂಟಿ ಸಹಭಾಗಿತ್ವ) ದವರಿಗೆ ಕಾರ್ಯಾದೇಶ ನೀಡಲಾಗಿದ್ದು, ಪ್ರಸ್ತುತ, ಯೋಜನೆಯ ಅನುಷ್ಠಾನ ಘಟಕ (ಕಲಬುರಗಿ ಮಹಾನಗರ ಪಾಲಿಕೆ) ವತಿಯಿಂದ ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಒಳಚರಂಡಿ ಜಾಲದ ಕಾಮಗಾರಿ ಕೈಗೊಳ್ಳಲಾಗುತ್ತಿದೆ.<br><br>• ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 62.87 ಕಿ.ಮೀ ಉದ್ದದ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಸದರಿ ಪೈಪ್ ಲೈನ್‌ಗಳ ವಿವರಗಳನ್ನು ವಾರ್ಡ್ವಾರುಗಳನುಸಾರ **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| (ಆ) | ಈ ಕಾಮಗಾರಿಗಳು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಒಳಚರಂಡಿಗಳು ತುಂಬಿ | ಸರ್ಕಾರದ ಆದೇಶ ಸಂಖ್ಯೆ:ನಅಇ 04 ಯುಡಿಎಸ್ 2022, ದಿನಾಂಕ:27.07.2022 ರನ್ವಯ ಕಲಬುರಗಿ ನಗರದ ಸಂಪೂರ್ಣ ಒಳಚರಂಡಿ ವ್ಯವಸ್ಥೆ ನಿರ್ವಹಣೆಯನ್ನು ಕಲಬುರಗಿ ಮಹಾನಗರ ಪಾಲಿಕೆ |

| | | |
|---|---|---|
| | ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಇದರಿಂದ ನಗರದ ರಸ್ತೆಗಳಲ್ಲಿನ ಕೊಳಚೆ ನೀರು ಹರಿದು ಸೊಳ್ಳೆಗಳು ಉತ್ಪತ್ತಿಯಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಹಸ್ತಾಂತರ ಪ್ರಮಾಣ ಪತ್ರದ ದಿನಾಂಕ:06.06.2023 ರಂತೆ ಹಸ್ತಾಂತರಿಸಲಾಗಿದ್ದು, ದಿನಾಂಕ:01-06-2023 ರಿಂದ ಕಲಬುರಗಿ ಮಹಾನಗರ ಪಾಲಿಕೆ ವತಿಯಿಂದ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br><br>ಒಳಚರಂಡಿ ಮಾರ್ಗವು ಗ್ರಾವಿಟಿ ಆಧಾರಿತ (ಗುರುತ್ವಾಕರ್ಷಣ) ವ್ಯವಸ್ಥೆಯಾಗಿದ್ದು, ಸದರಿ ಕೊಳವೆ ಮಾರ್ಗಗಳಲ್ಲಿ ಸಾರ್ವಜನಿಕರು ಅನಾವಶ್ಯಕ ವಸ್ತುಗಳನ್ನು ಹಾಕುವುದರಿಂದ ಸದರಿ ಕೊಳವೆ ಮಾರ್ಗವು ಬ್ಲಾಕ್ ಆಗುತ್ತದೆ. ಈ ಕುರಿತು ದೂರುಗಳು ಬಂದ ತಕ್ಷಣ ಮಹಾನಗರ ಪಾಲಿಕೆಯ ಯು.ಜಿ.ಡಿ. ನಿರ್ವಹಣೆ ತಂಡವು ಜಟ್ಟಿಂಗ್ ಯಂತ್ರವನ್ನು ಉಪಯೋಗಿಸಿ ಸದರಿ ಬ್ಲಾಕೇಜ್ ಗಳನ್ನು ತೆರವುಗೊಳಿಸಲಾಗುತ್ತದೆ. |
| (ಇ) | ಸಾರ್ವಜನಿಕ ಮಹತ್ವವುಳ್ಳ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದ ಪಾಲಿಕೆ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಎಲ್ಲಾ ಕಾಮಗಾರಿಗಳನ್ನು ಪಾಲಿಕೆಯ ಸಿಬ್ಬಂದಿ ವತಿಯಿಂದ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ. |

ಸಂಖ್ಯೆ : ನಅಇ 27 ಯುಎಂಎಸ್ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು